**ಅಸಲು ದಾವಾ ನಂ.178/2017**
**ಪಿ.ಡಬ್ಲ್ಯುಃ1**

**<u>ಸಾಕ್ಷಿಯನ್ನು ಇಂದು ದಿನಾಂಕಃ 23/04/2024 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು</u>**
**<u>ಮುಂದುವರೆದ ಪಾಟೀ ಸವಾಲುಃ ಶ್ರೀ.ಎಸ್.ಎಸ್.ಕಳ್ಳಿಗುಡ್ಡ. ಪ್ರತಿವಾದಿ ಪರ ವಕೀಲರಿಂದ</u>**

7. ನಿಡಿ 1 ನ್ನು ತಯಾರ ಮಾಡಲು ಹಾಗೂ ಸರ್ವೆ ಮಾಡಲು ಅರ್ಜಿ ನಾನೇ ಹಾಕಿರುತ್ತೇನೆ. ಮೊದಲಿನಿಂದಲೂ ಪ್ರತಿವಾದಿಯರು ನಮ್ಮ ಜಮೀನದಲ್ಲಿ ಒತ್ತವರಿ ಮಾಡಿರುತ್ತಾರೆಂದು ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನಮ್ಮ ಜಮೀನಿನ ಹದ್ದುಬಸ್ತಿ ಮಾಡಲು ಹಾಗೂ ಭೂ-ಮಾಪನ ಮಾಡಲು ಅರ್ಜಿಯನ್ನು ನಾನು ಸಲ್ಲಿಸಿದ್ದೇನು. ಸರ್ವೆ ಕಾಲಕ್ಕೆ ಜಮೀನು ಸರ್ವೆ ನಂಬರ 51 ಕ್ಕೆ ಸಂಬಂಧಪಟ್ಟಂತೆ ಎಷ್ಟು ಹಿಸ್ಸಾಗಳು ಇದ್ದವು ಎಂಬುದು ಮಾಹಿತಿ ನನಗೆ ಇತ್ತು ಎಂದರೆ ಸರಿ. ಸರ್ವೆ ಮಾಡಿದ ನಂತರ ಶಿವಪ್ಪ ಮೇಟಿ ಹಾಗೂ 2 ನೇ ಪ್ರತಿವಾದಿಯು ನಮ್ಮ ಜಮೀನದಲ್ಲಿ ಒತ್ತುವರಿ ಮಾಡಿರುತ್ತಾರೆ ಎಂದು ಗೊತ್ತಾಯಿತು. ಜಮೀನ ಸರ್ವೆ ನಂಬರ 51 ನ್ನು ಸರ್ವೆ ಮಾಡುವ ಕಾಲಕ್ಕೆ ನಾನು 1 ನೇ ಪ್ರತಿವಾದಿಯ ಜಮೀನದಲ್ಲಿ 1 ಎಕರೆ ಕ್ಷೇತ್ರವನ್ನು ಒತ್ತುವರಿ ಮಾಡಿದ್ದು ತಿಳಿಯಿತು ಎಂದರೆ ಸರಿ.

8. ಪ್ರತಿವಾದಿ ನಂಬರ 2 ಹಾಗೂ ಶಿವಪ್ಪ ಮೇಟಿಯವರು ನಮ್ಮ ಜಮೀನದಲ್ಲಿ ಒತ್ತುವರಿ ಮಾಡಿದ್ದಾರೆಂದು ಗೊತ್ತಾದ ಮೇಲೆ ನಾನು ಮುಂಚೆ ದಾವೆ ಹೂಡಿದ್ದೆ. ಸದರಿ ದಾವೆ ಸಂಖ್ಯೆ 463/2013 ಅಂತಾ ಇತ್ತು. ಸದರಿ ದಾವೆಯು ಇನ್ನೂ ಜಾಲ್ತಿಯಲ್ಲಿದೆ. ಸದರಿ ದಾವೆಯು ಗೌರವಾನ್ವಿತ ಹಿರಿಯ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯದಲ್ಲಿ ಜಾಲ್ತಿಯಲ್ಲಿರುತ್ತದೆ. ಸದರಿ ದಾವೆಯು ಯಾವ ಹಂತದಲ್ಲಿದೆ ನನ್ನ ವಕೀಲರಿಗೆ ಗೊತ್ತು. ಸದರಿ ದಾವೆಯ ಕಾಗದ ಪತ್ರಗಳನ್ನು ಈ ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ಆದರೆ ಸದರಿ ದಾವೆ ನಡೆಯುತ್ತಿರುವ ಕಾಗದ ಪತ್ರಗಳನ್ನು ಆ ನ್ಯಾಯಾಲದಲ್ಲಿ

ಹಾಜರುಪಡಿಸಿರುತ್ತೇನೆ. ನಾನು 1ನೇ ಪ್ರತಿವಾದಿಯ ಜಮೀನಿನಲ್ಲಿ ಒತ್ತುವರಿ ಮಾಡಿದ 1 ಎಕರೆ ಕ್ಷೇತ್ರವನ್ನು 1ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಿರುತ್ತೇನೆ. ನೀವು ಒತ್ತುವರಿ ಮಾಡಿದ 1 ಎಕರೆ ಕ್ಷೇತ್ರವನ್ನು ನೀವು 1ನೇ ಪ್ರತಿವಾದಿಗೆ ಬಿಟ್ಟುಕೊಡಲು ತಯಾರಿದ್ದಿರಾ ಎಂಬ ಪ್ರಶ್ನೆಗೆ ನಾನು ಒತ್ತುವರಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ನಾನು ಒತ್ತುವರಿ ಮಾಡಿದ 1 ಎಕರೆ ಕ್ಷೇತ್ರವನ್ನು ನ್ಯಾಯಾಲಯದಿಂದ ಆದೇಶವಾದರೆ ಮಾತ್ರ ಬಿಟ್ಟು ಕೊಡುತ್ತೇನೆ. ನಾನು ಒಬ್ಬ ನಿವೃತ್ತ ಜಮಾಬ್ದಾರಿ ಅಧಿಕಾರಿಯಾಗಿ ನಾನು ಸ್ವ-ಇಚ್ಛೆಯಿಂದ ಬಿಟ್ಟುಕೊಡುವುದಿಲ್ಲ ಎಂದರೆ ನಾನು ಒತ್ತುವರಿ ಆಗಿರುವುದಿಲ್ಲ ಎಂದು ಸಾಬಿತು ಪಡಿಸುತ್ತೇನೆ ಎಂದು ನುಡಿಯುತ್ತಾರೆ. ನೀವು ಒತ್ತುವರಿ ಮಾಡಿದ 1 ಎಕರೆ ಕ್ಷೇತ್ರವನ್ನು ನೀವು ಸ್ವ-ಇಚ್ಛೆಯಿಂದ ಬಿಟ್ಟು ಕೊಡಲ್ವಾ ಎಂಬ ಪ್ರಶ್ನೆಗೆ ಸಾಕ್ಷಿಯು ನ್ಯಾಯಾಲಯದಿಂದ ಆದೇಶವಾದರೆ ಮಾತ್ರ ಬಿಟ್ಟು ಕೊಡುತ್ತೇನೆ ಎಂದು ನುಡಿಯುತ್ತಾರೆ.

9. ನಾನು ಹೂಡಿದ ದಾವೆಯ ಸಂಘತಿಗಳು ನನಗೆ ಗೊತ್ತಿವೆ. ಅದರಂತೆ 1ನೇ ಪ್ರತಿವಾದಿಯು ಸಮನ್ಸ ಜಾರಿಯಾದ ಮೇಲೆ ಹಾಜರು ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು 2021 ರಲ್ಲಿ ನನ್ನ ಮುಖ್ಯ ವಿಚಾರಣೆ ಸಲ್ಲಿಸಿರುತ್ತೇನೆ ಅದರ ಮಾಹಿತಿ ನನಗೆ ಇರುತ್ತದೆ ಎಂದರೆ ಸರಿ. ಅದರಂತೆ 1ನೇ ಪ್ರತಿವಾದಿಯು 2018 ರಲ್ಲಿ ಪ್ರತಿವಾದ ಪತ್ರದ ಜೊತೆಗೆ ಎದುರು ಕ್ಲೇಮು ಸಹ ಸಲ್ಲಿಸಿರುತ್ತಾರೆ ಎಂದರೆ ಸರಿ. ಪ್ರಸ್ತೂತ ದಾವೆಯ ಎಲ್ಲ ಮಾಹಿತಿಯು ಗೊತ್ತಿದ್ದರು ಸಹ 1ನೇ ಪ್ರತಿವಾದಿಯು ಹಾಜರು ಆಗಿಲ್ಲ ಮತ್ತು ಎದುರು ಕ್ಲೇಮನ್ನು ಹಾಕಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. 1 ನೇ ಪ್ರತಿವಾದಿಯು ಊರು ಹಿರಿಯರ ಮುಂದೆ ನಾನು ಒತ್ತುವರಿ ಮಾಡಿದ 1 ಎಕರೆ ಕ್ಷೇತ್ರವನ್ನು ಬಿಟ್ಟುಕೊಡಲು ತಿಳಿಸಿದರು ಎಂದರೆ ಸರಿಯಲ್ಲ. ಸರ್ವೆ ಮಾಡುವ ಕಾಲಕ್ಕೆ ನನ್ನ ಹಾಗೂ 1ನೇ ಪತ್ರತಿವಾದಿಯ ಸಂಬಂದ ಚನ್ನಾಗಿತ್ತು ಎಂದರೆ ಇಲ್ಲಿಯವರೆಗೂ ಚನ್ನಾಗಿದೆ. 1ನೇ

ಪ್ರತಿವಾದಿ ಹಾಗೂ ಆತನ ಸಹೋದರ ಕೆಲಸದ ನಿಮಿತ್ಯವಾಗಿ ಊರಿನ ಆಚೆಗೆ ಇರುತ್ತಿದ್ದರು ಎಂದರೆ ಸರಿಯಲ್ಲ. ಮೋಜನಿ ಮಾಡುವ ಮುನ್ನ 1ನೇ ಪ್ರತಿವಾದಿಯು ಬೆಂಗಳೂರಿನ ಕನಕಪೂರದಲ್ಲಿ ವಾಸಿಸುತ್ತಿದ್ದರು ಎಂದರೆ ಸರಿಯಲ್ಲ. ಮೋಜನಿ ಮಾಡುವ ಮುನ್ನ 1ನೇ ಪ್ರತಿವಾದಿಯು ಕನಕಪೂರದಲ್ಲಿ ಹಾಗೂ ಆತನ ಸಹೋದರ ಬೆಂಗಳೂರಿನಲ್ಲಿ ನೌಕರಿ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಇಲ್ಲ ವಿಜಯಪುರದಲ್ಲಿ ಇದ್ದರು ಎಂದು ನನಗೆ ಮಾಹಿತಿ ಇತ್ತು ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯು 1997 ರಿಂದ 2002 ರವರೆಗೆ ಬೆಂಗಳೂರಿನ ಕನಕಪುರದಲಿ ಇದ್ದು 2001 ರಿಂದ 2002 ರ ಕಾಲಕ್ಕೆ ವರ್ಗಾವಣೆ ಗೊಂಡು ಮಸೂತಿ ಗ್ರಾಮಕ್ಕೆ ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯು ಹಾಗೂ ಅವರ ಮನೆಯವರು ಹುಣಶ್ಯಾಳದಲ್ಲಿ ಇರದಿರುವ ಬಗ್ಗೆ ಗೈರು ಪಾಯ್ದೆ ತೆಗೆದುಕೊಂಡು ಅವರ ಜಮೀನುವನ್ನು ಅತಿಕ್ರಮಣ ಮಾಡಿರುತ್ತೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯು ಪ್ರತಿವಾದಿಗೆ ಒತ್ತುವರಿ ಮಾಡಿದ ವಿಷಯ ಗೊತ್ತಾದ ನಂತರ ಸುಮಾರು 16 ವರ್ಷಗಳ ಕಾಲ 1ನೇ ಪ್ರತಿವಾದಿಯು ಊರು ಹಿರಿಯ ಮುಖಾಂತರ ನನಗೆ ಸದರಿ ಕ್ಷೇತ್ರವನ್ನು ಬಿಟ್ಟುಕೊಡಲು ಹೇಳಿದರು ಸಹ ನಾನು ಬಿಟ್ಟು ಕೊಟ್ಟರುವುದಿಲ್ಲ ಎಂದರೆ ನ್ಯಾಯಾಲಯದ ಆದೇಶವಾದರೆ ಬಿಟ್ಟುಕೊಡುತ್ತೇನೆ. 2017 ಜೂನ್ ತಿಂಗಳಿನಲ್ಲಿ 1ನೇ ಪ್ರತಿವಾದಿಯು ನನಗೆ ಒತ್ತುವರಿ ಜಮೀನವನ್ನು ಬಿಟ್ಟು ಕೊಡಲು ಹೇಳಿದ್ದರು ನಾನು ಬಿಟ್ಟು ಕೊಡದೆ ಕಾರಣಕ್ಕೆ ಅವರು ನನ್ನ ಮೇಲೆ ಪ್ರಕರಣವನ್ನು ದಾಖಲಿಸುತ್ತೇನೆ ಎಂದು ಹೇಳಿದಾಗ ನಾನೇ ಸ್ವತ ಅವರ ವಿರುದ್ದ ದಾವೆಯನ್ನು ಹೂಡಿರುತ್ತೆನೆ ಎಂದರೆ ಸರಿಯಲ್ಲ. ವಾದ ಪತ್ರದ ಹಾತನಕಾಶೆಯಲ್ಲಿ ತೋರಿಸಿದ ಎನ್.ಎಮ್. ಕ್ಷೇತ್ರವು 1ನೇ ಪ್ರತಿವಾದಿಯ ಜಮೀನಕ್ಕೆ ಮಾತ್ರ ಸಂಬಂದ ಪಟ್ಟಿರುತ್ತದೆ ಎಂದರೆ ಸರಿ. ನಾನು ಒತ್ತುವರಿ ಮಾಡಿದ ಕ್ಷೆತ್ರದಲ್ಲಿ ಕೃಷಿ ಹೊಂಡ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಜಮೀನದಲ್ಲಿ ಮಾಡಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. 1ನೇ

ಪ್ರತಿವಾದಿಯು ನನ್ನ ವಿರುದ್ದ ಕಾನೂನು ಕ್ರಮ ಕೈಗೊಳ್ಳುತ್ತಾರೆಂದು ತಿಳಿದುಕೊಂಡು ನಾನೇ ಸ್ವತ ಅವರ ವಿರುದ್ದ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ವಿರುದ್ದ ದಾವೆ ಹೂಡಲು ನನಗೆ ಯಾವುದೆ ಹಕ್ಕು ಅಧಿಕಾರ ಇಲ್ಲದಾಗಿಯು ನಾನು ಅವರ ವಿರುದ್ದ ಸುಳ್ಳು ದಾವೆಯುನ್ನು ಹೂಡಿದ ಕಾರಣ ಅವರಿಗೆ ಪರಿಹಾರ ನೀಡಬೇಕಾಗುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ಜಮೀನದಲ್ಲಿ ಒತ್ತುವರಿ ಮಾಡಿದವರ ವಿರುದ್ದ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನದೇ ತಪ್ಪು ಇದ್ದರು ಸಹ 1 ನೇ ಪ್ರತಿವಾದಿಯ ವಿರುದ್ದ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

ಹೆಚ್ಚುವರಿ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.